# ವಾಲ್ಮೀಕಿರಾಮಾಯಣದಲ್ಲಿಸೀತೆ

ಧಾರ್ಮಿಕ ಗ್ರಂಥವೆಂಬ ಭಾವನೆಯನ್ನು ದೂರವಿಟ್ಟು, ಕೇವಲ ಮಹಾ ಕಾವ್ಯವೆಂಬ ಭಾವನೆಯಿಂದ ಓದಿದಾಗಲೂ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಆದಿಯಿಂದ ಕೊನೆಯವರೆಗೆ ಸೀತೆಯ ಪಾತಿವ್ರತ್ಯವನ್ನು ತೋರಿಸಿದ್ದು ಕಂಡು ಬರುತ್ತದೆ, ಶೀಲ್ಯದೊಳ್ ಅವನಿಜೆ ಎಂಬಂತೆ ಇಡೀ ರಾಮಾಯಣದಲ್ಲಿ ಪಾತಿವ್ರತ್ಯದ ಅಗ್ನಿ ಪರೀಕ್ಷೆಗೆ ವಾಲ್ಮೀಕಿಗಳು ಗುರಿಪಡಿಸಿದ್ದು ಸೀತೆಯನ್ನು ಮಾತ್ರ. ಇಂದು ನಾವು ವಿವಾಹದಲ್ಲಿ ಪಾತಿವ್ರತ್ಯದ ಪ್ರತೀಕವಾಗಿ ದರ್ಶನ ಮಾಡುವ ಅರುಂಧತಿಯೂ ಆ ಮಟ್ಟಕ್ಕೆ ಬರಲಾರಳು.

ಒಂದು ಗ್ರಂಥದ ತಾತ್ಪರ್ಯ ನಿರ್ಣಯಿಸಬೇಕಾದರೆ ಅದರ ಉಪಕ್ರಮ ಅಂದರೆ ಆರಂಭ, ಅಭ್ಯಾಸ (ಅಂದರೆ ಮತ್ತೆ ಮತ್ತೆ ಒತ್ತುಕೊಟ್ಟು ಆಗಾಗ ಹೇಳುವುದು) ಉಪಸಂಹಾರ ಇವುಗಳನ್ನು ನೋಡಬೇಕು. ಸೀತೆಯ ವಿಷಯದಲ್ಲಿ ಆರಂಭವನ್ನು ವರ್ಣಿಸುತ್ತಾ ವಾಲ್ಮೀಕಿಗಳು ಜನಕಸ್ಯ ಕುಲೇ ಜಾತಾ ದೇವ ಮಾಯೇವ ನಿರ್ಮಿತಾ ಸರ್ವ ಲಕ್ಷಣ ಸಂಪನ್ನ ನಾರೀಣಾಂ ಉತ್ತಮಾ ವಧೂಃ (ಉತ್ತಮ ವಧು) ಎನ್ನುತ್ತಾರೆ. ಅಂದರೆ ಜನಕನ ಮನೆತನದಲ್ಲಿ ಹುಟ್ಟಿದ ಅವಳು ಮಾಯಾ ಶಕ್ತಿಯಿಂದ ನಿರ್ಮಿಸಿದಂತೆ ಸುಂದರಿಯಾಗಿದ್ದಳು, ಸರ್ವಲಕ್ಷಣ ಸಂಪನ್ನಳಾದ ಅವಳು ಸ್ತ್ರೀ ಕುಲದಲ್ಲಿಯೇ ಸುಂದರಳಾಗಿದ್ದಳು. ಇಂತಹ ಸುಂದರಿಯನ್ನು ಜನಕನು ಶ್ರೀರಾಮನಿಗೆ ವಿವಾಹ ಮಾಡಿಕೊಟ್ಟು ಇವಳು ನಿನ್ನ ಸಹಧರ್ಮಚಾರಿಣಿ.

ಪತಿವ್ರತಾ ಮಹಾಭಾಗ ಛಾಯೇ
ವಾನುಗತ ತವ

ನಿನ್ನ ಹಿಂದೆ ಈ ಪತಿವ್ರತೆಯು ನೆರಳಿನಂತೆ ಇರತಕ್ಕವಳು ಯಾಜ್ಞವಲ್ಕ್ಯರ ಶಿಷ್ಯರು ದೊಡ್ಡ ವೇದಾಂತಿಯೂ ಆದ ಜನಕನ ಈ ಶಬ್ದಗಳಲ್ಲೇ ಕವಿ ಪ್ರಾರಂಭದಲ್ಲಿಯೇ ಸೀತೆಯ ಪರಿಚಯವನ್ನು ಸಂದೇಹಕ್ಕೆ ಅವಕಾಶವಿಲ್ಲದಂತೆ ನೀಡಿದ್ದಾನೆ, ಮುಂದಿನ ಕವಿಗಳಾದ ಭಾಸ, ಕ್ಷೇಮೇಂದ್ರ ಮುಂತಾದವರೂ ಕೂಡ ವಾಲ್ಮೀಕಿಯನ್ನೇ ಅನುಸರಿಸಿದ್ದಾರೆ.

ತನ್ನ ಪತಿಗೆ ಪಟ್ಟಾಭಿಷೇಕ ತಪ್ಪಿದ ಸುದ್ದಿ ಕೇಳಿದ ಸೀತೆ ಒಂದೂ ಮಾತಾಡಿಲ್ಲ. ಆದರೆ ತನ್ನನ್ನು ಬಿಟ್ಟು

---

ಸ್ಥಳೀಯ ವಿಪ್ರದ್ಯೋಗಿಷ್ಠ ಸ್ತ್ರೀಚೆಗೆ ಶಂಕರಮಠದಲ್ಲಿ ಏರ್ಪಡಿಸಿದ್ದ ವಾಲ್ಮೀಕಿ ರಾಮಾಯಣದಲ್ಲಿ ಸೀತೆ ಎಂಬ ಬಗ್ಗೆ ಬೆಂಗಳೂರಿನ ಪ್ರೊ|| ರಂಗನಾಥಶರ್ಮರು ಮಾಡಿದ ಉಪನ್ಯಾಸದ ಸಾರಾಂಶ.

---

ಕಾಡಿಗೆ ಹೋಗುವ ವಿಚಾರ ಹೇಳಿದಾಗ ಮಾತ್ರ ಸೀತೆಗೆ ಸಿಟ್ಟು ಬಂದಿತು. ಅದು ಪ್ರೀತಿ ಕೋಪ. ಅತೋ ದುಃಖತರಂ ಮಮ, ಎಂದು ಕಾಡಿನಲ್ಲಿ ಬರಬಹುದಾದ ಕಷ್ಟಕಾರ್ಪಣ್ಯಗಳನ್ನು ವಿಧವಿಧವಾಗಿ ಬಣ್ಣಿಸಿದರೂ ಸೀತೆ ಬರುವುದಾಗಿ ಹಟತೊಟ್ಟಳು. ರಾಮನು ಕಾಡಿನಲ್ಲಿ ಕಲ್ಲು ಮುಳ್ಳು ಇದೆ ಎಂದರೆ ಸೀತೆ ಅದನ್ನು ತೆಗೆದುಹಾಕುತ್ತಾ ಮುಂದೆ ಹೋಗುವೆ ಎನ್ನುತ್ತಾಳೆ. ಕ್ರೂರಮೃಗಗಳಿವೆ ಎಂದರೆ ನಿನ್ನನ್ನು ಕಂಡಕ್ಷಣ ಆ ಕ್ರೂರ ಮೃಗಗಳೆಲ್ಲಾ ಓಡಿ ಹೋಗುತ್ತವೆ ಎನ್ನುತ್ತಾಳೆ. ಅರಣ್ಯದಲ್ಲಿ ಆಹಾರವಿಲ್ಲ ಎಂದರೆ ನೀನು ತಿಂದು ಮಿಕ್ಕದ್ದನ್ನು ತಿಂದು ಬದುಕುವೆ ನೀನೊಬ್ಬ ಜೊತೆಗಿದ್ದರೆ ಉಪವಾಸಕೂಡ ಇಂಬಲ್ಲೆ ಎನ್ನುತ್ತಾಳೆ ನೆಂಟರಿಷ್ಟರನ್ನು ಬಿಟ್ಟು ಬರುವುದು ಧರ್ಮವಲ್ಲ ಎಂದರೆ ನನಗೆ ಧರ್ಮವೆಲ್ಲಾ ಗೊತ್ತು ನನ್ನ ತಂದೆ ತಾಯಿಗಳು ಧರ್ಮದ ಮಾರ್ಗ ತಿಳಿಸಿದ್ದಾರೆ ಎನ್ನುತ್ತಾಳೆ. ದೇವರನ್ನು ಪೂಜಿಸಿಕೊಂಡು ಮನೆಯಲ್ಲಿಯೇ ಇರು ಎಂದರೆ ಗಂಡನಿಗಿಂತ ದೇವರಿಲ್ಲ ಎನ್ನುತ್ತಾಳೆ.

ತಂತಿ ಇಲ್ಲದೇ ವೀಣೆ ನುಡಿಯದು ಚಕ್ರವಿಲ್ಲದ ರಥ ಚಲಿಸದು; ಹೆಣ್ಣಿಗೆ ಗಂಡನಿಲ್ಲದಿದ್ದರೆ ನೂರು ಜನ ಮಕ್ಕಳಿದ್ದರೂ ಸುಖವಿಲ್ಲ ಎಂದು ಸಾರಿದ ಸೀತೆ ಅರಣ್ಯಕ್ಕೆ ರಾಮನೊಂದಿಗೆ ಹೊರಡುತ್ತಾಳೆ. ಅವಳು ಈ ಸಂದರ್ಭದಲ್ಲಿ ರಾಮನ ಮೇಲೆ ಹುಸಿ ಮುನಿಸು ಮಾಡಿದ್ದು ಉಂಟು ಇದನ್ನು ವಾಲ್ಮೀಕಿಗಳು

ಪ್ರಣಯಾ ದೇವ ಸಂಕ್ರುದ್ಧಾ....
ಪ್ರಣಯಾಚ್ಚ ಅಭಿಮಾನಾಚ್ಚ ಪರಿಚಿಕ್ಷೇಪ ರಾಘವಂ

ರಾಮನು ಮತ್ತೆ ಮತ್ತೆ ಅರಣ್ಯದ ಕಷ್ಟಕಾರ್ಪಣ್ಯಗಳನ್ನು ವರ್ಣಿಸಿ ತಡೆದಾಗ, ಒಂದು ಹಂತದಲ್ಲಿ ಸೀತೆ,

ಕಿಂತ್ವಾ ಅಮನ್ಯತ ವೈದೇಹಃ ಪಿತಾ ಮೆ ಜನಕಾಧಿಪಃ ...
ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ ಅಂದರೆ ನಮ್ಮಪ್ಪ ನಿನಗೆ ಮದುವೆ ಮಾಡಿ ಕೊಡುವಾಗ ನೀನೊಂದು ಹೆಂಗಸೆಂದು ತಿಳಿದು ಕೊಟ್ಟಿದ್ದನೋ ಅಥವಾ ಗಂಡಸೆಂದು ತಿಳಿದು ಕೊಟ್ಟಿದ್ದನೊ? ಎಂದು ಅರ್ಥವೇ ಹೊರತು ಈ ಮಾತಿಗೆ ತನ್ನ ಗಂಡ ಷಂಡ ಎಂಬ ಅರ್ಥವಲ್ಲ. ಒಂದುವೇಳೆ ಗಂಡ ಷಂಡನಾದಿದ್ದರೆ ಹೀಗೆ ಹೇಳಿದ ಅವಳು ಪತಿಯನ್ನು ಅಪ್ಪಿ ಕಣ್ಣೀರು ಸುರಿಸುತ್ತಿರಲಿಲ್ಲಾ. ಅವಳ ದುಃಖವನ್ನು ಅರಿತ ರಾಮನು

ನ ದೇವಿ ತವ ದುಃಖೇನ ಸ್ವರ್ಗಮಪಿ ಅಭಿರೋಚಯೇ...
ಪ್ರಾಣೇಭ್ಯೋಪಿ ಗರೀಯಸಿ

ನೀನು ನನ್ನ ಪ್ರಾಣಕ್ಕಿಂತಲೂ ಪ್ರಿಯಳು. ನಿನ್ನನ್ನು ದುಃಖಕ್ಕೆ ಗುರಿಮಾಡಿ ಸ್ವರ್ಗವನ್ನೂ ಬಯಸಲಾರೆ. ಎಂದು ಹೇಳಿ ನೀನು ವನವಾಸಕ್ಕಾರಿಯೇ ಹುಟ್ಟಿರುವೆ ಎಂದು ತೋರುತ್ತದೆ. ನಿನಗೆ ಅಷ್ಟು ಇಚ್ಛೆ ಇದ್ದಲ್ಲಿ ನನ್ನೊಂದಿಗೆ ಬಾ. ಸಹಧರ್ಮಚಾರಿಣೀ ಭವ ಎಂದು ಅರಣ್ಯಕ್ಕೆ ಕರೆದೊಯ್ಯಲು ಒಪ್ಪುತ್ತಾನೆ.

ಇನ್ನು ಅಭ್ಯಾಸ (ಮಾತನ್ನು ಮತ್ತೆ ಮತ್ತೆ ಒತ್ತುಗೊಟ್ಟು ಹೇಳುವುದು) ಎಂಬ ಎರಡನೆಯ ಘಟ್ಟಕ್ಕೆ ಬಂದಾಗ: ಈ ಗ್ರಂಥದ ಮಧ್ಯದಲ್ಲಿ ಆಗಾಗ ಕವಿ ಸೀತೆ ಪತಿವ್ರತೆ ಎಂಬುದನ್ನು ಒತ್ತಿ ಹೇಳುತ್ತಾನೆ. ಉದಾಹರಣೆಗೆ;— ಅತ್ರಿಮುನಿಗಳ ಆಶ್ರಮಕ್ಕೆ ಹೋದಾಗ ಅವರು ನಿನ್ನೊಂದಿಗೆ ಕಷ್ಟಪಡಲು ಇವಳನ್ನೇಕೆ ಕರೆತಂದೆ ಎಂದು ಪ್ರಶ್ನಿಸಲು, ರಾಮನು ಅವಳೇ ಹಠ ಹಿಡಿದು ಬಂದಿದ್ದಾಳೆ ಎನ್ನುತ್ತಾನೆ. ಆಗ ಅತ್ರಿ ಮುನಿಗಳು ಅನಸೂಯ ಇದ್ದಲ್ಲಿ ಕಳುಹಿಸುತ್ತಾರೆ. ಸೀತೆ ಒಳಗೆ ಬಂದಾಗ ಅನಸೂಯೆಯು ಸೀತೆಗೆ ನಿನ್ನ ಮದುವೆಯ ಕಥೆಯನ್ನು ನಿನ್ನ ಬಾಯಿಂದಲೇ ಕೇಳುವ ಆಸೆಯಾಗಿದೆ ಎಂದು ಹೇಳಿ ಅವಳಿಂದ ಮದುವೆಯ ವೃತ್ತಾಂತವನ್ನು ಹೇಳಿಸುತ್ತಾಳೆ. ಆಗ ರಾಮನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿರುವ ಸೀತೆ,

ಗುಣಶ್ಲಾಘ್ಯಃ ಜಿರಾನುರಾಗಃ ಮಾತೃವತ್ ಪಿತೃವತ್, ಪ್ರಿಯಃ

ಅಂದರೆ ತನ್ನ ಪತಿ ಗುಣವನ್ನು ಗೌರವಿಸುವವನು, ತನ್ನಲ್ಲಿ ಅತಿ ಪ್ರೀತಿಯುಳ್ಳವನು, ತಂದೆ ತಾಯಿಗಳಂತೆ ಪ್ರೀತಿಯಿಂದ ನನ್ನನ್ನು ನೋಡಿಕೊಳ್ಳುವವನು ಎನ್ನುತ್ತಾಳೆ. ವೀರನಾದ ಅವನನ್ನು ಬಿಟ್ಟು ಇರಲು ನನ್ನಿಂದ ಆಗದು.

ಅದಕ್ಕಾಗಿ ತಾನೂ ಬಂದೆ ಎನ್ನುತ್ತಾಳೆ. ಆಗ ಸೀತೆಗೆ ಒಡವೆ ನೀಡಿ, ಸೀರೆ ಉಡಿಸಿ, ಕಣ್ತುಂಬ ನೋಡಿ ಆಶೀರ್ವದಿಸಿ ಪತಿವ್ರತಾ ಶಿರೋಮಣಿಯಾದ ಅನಸೂಯ ಕಳುಹಿಸಿ ಕೊಡುತ್ತಾರೆ.

ಮುಂದೆ ಅಗಸ್ತ್ಯರು ಕೂಡ ನೀನು ಅರುಂಧತಿಯಂತೆ ಶ್ಲಾಘ್ಯಳೂ, ಚಾರಿತ್ರ್ಯವಂತಳೂ ಆಗಿರುವೆ ಎನ್ನುತ್ತಾಳೆ.

ಶ್ಲಾಘ್ಯಾಚ ಪತಿವೃತ್ತಾಚ ಯಥಾ ದೇವಿ ಅರುಂದತೀ, ಎಂಬ ಮಾತು ಸ್ಮರಣೀಯ. ಮುಂದೆ ಹನುಮಂತನೂ ಕೂಡ ಲಂಕೆಗೆ ಹೋಗಿ ಬಂದ ಬಳಿಕ ಶ್ರೀರಾಮನಿಗೆ ಅವಳ ವಾರ್ತೆಯನ್ನು ತಿಳಿಸುವ ಮೊದಲು

ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ಪ್ರತ್ಯಭಾಷತ ಎಂದು ಹೇಳಿ ದಕ್ಷಿಣ ದಿಕ್ಕಿಗೆ ತಿರುಗಿ ಸೀತೆಗೆ ವಂದಿಸಿ ನಂತರ ಮಾತನಾಡತೊಡಗುತ್ತಾನೆ ಅವಳ ಕಣ್ಣೀರು ಚಿಂತೆಯಾಗಿ ರಾವಣ ನನ್ನ ಮುಟ್ಟಿಲ್ಲವಲ್ಲ ನಿಜಕ್ಕೂ ಆ ರಾವಣ ಗಟ್ಟಿಗ ಎನ್ನುತ್ತಾನೆ. ಭಕ್ತೀಭರ್ತರಿ ಜೋತ್ರವಾ ಅವಳು ಸದಾ ನಿನ್ನನ್ನೇ ಧ್ಯಾನಿಸುತ್ತಾಳೆ ಎನ್ನುತ್ತಾನೆ. ಮುಂದೆ ಮಂಡೋದರಿಯೂ ಕೂಡ ತನ್ನ ಪತಿಯನ್ನು ಕೊಂದವನು ರಾಮನಲ್ಲ, ಪತಿವ್ರತಾ ಶಿರೋಮಣಿಯಾದ ಸೀತೆಯ ತಪಸ್ಸು ಎನ್ನುತ್ತಾಳೆ.

ಪತಿವ್ರತಾಯಾಃ ತಪಸಾ ನೂನಂ ದಗ್ಧೋಸಿ ಮೇ ಪ್ರಭೋ....

ಎಂಬ ಮಾತು ಬರುತ್ತದೆ. ಒಂದು ಪರ್ವದಲ್ಲಿ ಸೀತೆಯ ಯೋಗ್ಯತೆಯನ್ನು ಅವಳು ಅರಿತಿದ್ದಾಳೆ.

ರಾವಣನು ಮಹಾಪರಾಕ್ರಮಿ, ವೈಭವಶಾಲಿ, ಕಾಮಿ ಕೂಡಾ. ಅವನು ತನ್ನ ಪರಾಕ್ರಮವನ್ನು ಕೊಚ್ಚುತ್ತಾ ಸೀತೆ ಜೀವತಿ ವಾನವ ಸೀತೆಯೇ ರಾಮನು ಬದುಕಿದ್ದಾನೋ ಇಲ್ಲವೋ? ನನ್ನನ್ನು ಒಪ್ಪಿ ಅಪ್ಪಿ ಬಿಡು ಎಂದಾಗ ನನ್ನ ಪಾತಿವ್ರತ್ಯದಿಂದಲೇ ನಿನ್ನನ್ನು ಕೊಂದು ಬಿಡುತ್ತಿದ್ದೆ, ಆದರೆ ರಾಮನ ಅಜ್ಞೆಯಿಲ್ಲ ಎಂಬ ಮಾತು ಅಲ್ಲಿ ಬರುತ್ತವೆ. ಅಸಾದೇಶಾತ್ತು ರಾಮಸ್ಯ ಎಂಬ ಮಾತು ಸ್ಮರಣಾರ್ಹ.

ವಿರಾಧನ ಸಂದರ್ಭದಲ್ಲಿಯೂ ಕಹಾ ರಾಮನು ವಿರಾಧನ ಬಗ್ಗೆ ಸತ್ತರಿಸಿದರೆ. ಲಕ್ಷ್ಮಣ ಎಡಗೈಯನ್ನು ಕತ್ತರಿಸುತ್ತಾನೇ ಲಕ್ಷ್ಮಣನಿಗಿಂತಲೂ ರಾಮನು ಪರಾಕ್ರಮಿ ಎಂಬುದು ಇಲ್ಲಿಯೂ ಸ್ಪಷ್ಟ. ಕ್ರುದ್ಧಾಃ ಸರ್ಪ ಇವ ಶ್ವಸನ್ ಸರ್ಪದಂತೆ ಕ್ಷುದ್ರನಾಗಿ ನಿಟ್ಟುಸಿರು ಬಿಡುತ್ತಾ ಎಂಬ ಸರಳವಾದ ಅರ್ಥವುಳ್ಳ ಪದಗಳಿಗೆ ಲೈಂಗಿಕ ವಿಚಾರವ ಧ್ವನಿಕಾರನಾದ ಆನಂದವರ್ಧನನಿಗೂ ಹೊಳೆದಿಲ್ಲ.

ಕೆಲವೊಮ್ಮೆ ಸಂದರ್ಭವನ್ನು ನೋಡಿ ಶಬ್ದಗಳಿಗೆ ಅರ್ಥ ಕಲ್ಪಿಸಬೇಕಾಗುತ್ತದೆ. ಉದಾಹರಣೆಗೆ :- ತನ್ನೊಡನೆ ಅರಣ್ಯಕ್ಕೆ ಹೊರಟ ಲಕ್ಷ್ಮಣನನ್ನು ಕುರಿತು, ರಾಮನು ನೀನು ಮನೆಯಲ್ಲಿಯೇ ಇದ್ದು ಅನಾಥೆಯಾದ ತಾಯಿ ಕೌಸಲ್ಯೆಯನ್ನು ಚೆನ್ನಾಗಿ ನೋಡಿಕೋ ಎಂಬ ಅರ್ಥದಲ್ಲಿ ಅನಾಥಾಯ ; ನಾಥೋಭವ ಎನ್ನುತ್ತಾನೆ, ಇಲ್ಲಿ ಅನಾಥೆ

(ನಾಳಿನ ಸಂಚಿಕೆಗೆ)

# ವಾಲ್ಮೀಕಿರಾಮಾಯಣದಲ್ಲಿಸೀತೆ ೩

(ಹಿನ್ನಿನ ಸಂಚಿಕೆಯಿಂದ)

ಗೆ ನಾಥವಾಗು ಎಂದರೆ ಕೌಸಲ್ಯೆಗೆ ಪತ್ನಿಯಾಗು ಎಂದು ಅರ್ಥ ಮಾಡಲು ಸಾಧ್ಯವೇ ? ಇನ್ನು ರಾಮನೊಬ್ಬ ಅಸಾಧಾರಣ ಪರಾಕ್ರಮಿ ಎಂಬುದನ್ನು ಸಾವಿರಾರು ವಿಶೇಷಣಗಳಲ್ಲಿ ರಾಮಾಯಣದುದಕ್ಕೂ ಕಾಣಬಹುದು.

ಉದಾಹರಣೆಗೆ :— ಪುರುಷ ವ್ಯಾಘ್ರ ಮಹಾ ಬಾಹು : ಪುರುಷರ್ಷಭ ಮುಂತಾದುವು, ಅವನು ಆಡುವ ಒಂದೊಂದು ಮಾತು ಅವನ ಪರಾಕ್ರಮಕ್ಕೆ ನಿದರ್ಶನ.

ಸಮುದ್ರಂ ಶೋಷಯಿಷ್ಯಾಮಿ

ಆದ್ಯ ರಾಮಸ್ಯ ರಾಮತ್ವಂ ದರ್ಶಯಾಮಿ....

ರಾಮ ರಾವಣಯೋರ್ ಯುದ್ಧಂ ರಾಮ ರಾವಣಯೋರಿವ

ಆತನು ಮುನಿದು ಯುದ್ಧಕ್ಕೆ ನಿಂತರೆ ಸಮುದ್ರವನ್ನೇ ಬತ್ತಿಸಿಯಾನು, ಇಂದು ಈ ಜಗತ್ತು ಅ ರಾವಣವಾಗಲೀ ಅಥವಾ ಅರಾಮವಾಗಲೀ, ರಾಮ ರಾವಣರ ಯುದ್ಧಕ್ಕೆ ಆ ಯುದ್ಧವೇ ಸರಿಸಾಟಿ; ಇನ್ನೊಂದಿಲ್ಲಾ. ಇದೆಲ್ಲಾ ರಾಮನ ಮಹಾಪೌರುಷಕ್ಕೆ ನಿದರ್ಶನಗಳು. ಸೌಂದರ್ಯದಲ್ಲಿ ಅವನು ಅತಿ ಸುಂದರ. ಪುಂಸಾಂ ಮೋಹನರೂಪ, ಕಾರುಣ್ಯ ಪೂರ್ಣ.

ಲಕ್ಷ್ಮಣನೂ ಅಷ್ಟೇ ವೀರ ಬ್ರಹ್ಮಚಾರಿ. ನಾನು ಬ್ರಹ್ಮಚಾರಿ ನಿಜವಾಗಿದ್ದರೆ, ಎಲೈ ಬಾಣವೇ ಇಂದು ಈ ಇಂದ್ರಜಿತುವನ್ನು ಕೊಲ್ಲು ಎಂದು ನುಡಿಯುವ ಅವನ ಮಾತು ಮನನೀಯವಾದದು.

ಲೋಕೋತ್ತರವಾದ ಜಿಂಕೆಯನ್ನು ಕಂಡಾಗ ತನ್ನ ಅರಣ್ಯವಾಸದ ಗುರುತಾದಿ ಏನಾದರೂ ಒಯ್ಯಬೇಕು, ಎಂಬ ಅಪೇಕ್ಷೆಯಿಂದ ಅದನ್ನು ಹಿಡಿದುಕೊಡಲು ಬೇಡಿಕೊಂಡಳು. ಅದು ಅಂತಃಪುರದ ಆಟಿಗೆಯಾದೀತು ಎಂಬ ಆಸೆ ತನಗಿತ್ತು. ಆ ಮಾಯಾಜಿಂಕೆ ರಾಮನಿಯಿಂದ ಹಾ ಸೀತೆ ಹಾಲಕ್ಷ್ಮಣ ಎಂದು ಕೂಗಿದ್ದು ಕೇಳಿದಾಗ ರಾಮನ ಮೇಲಿನ ಅತಿಯಾದ ಪ್ರೀತಿ ಇದ್ದುದರಿಂದಲೇ ಸೀತೆಗೆ ಅದು ರಾಮನಧ್ವನಿ ಎನಿಸಿತು. ಸೀತೆ ಲಕ್ಷ್ಮಣರು ಮಾತ್ರ ಆ ವೇಳೆಯಲ್ಲಿ ಆಶ್ರಮದಲ್ಲಿರುವಾಗ. ಅವರಿಬ್ಬರ ಹೆಸರನ್ನು ಬಿಟ್ಟು ಅಲ್ಲಿಲ್ಲದ ಇನ್ನಾರ ಹೆಸರನ್ನು ಹೇಳಲು ಸಾಧ್ಯ ? ಆ ಎರಡು ಹೆಸರನ್ನು ಹೇಳಿದ್ದೇ ಅವರಿಬ್ಬರ ಪ್ರೇಮ ಸೂಚಿ ಎನ್ನುವುದು ಊತರ್ಕ, ಹಾಗೇನಾದರೂ ಇದ್ದಿದ್ದರೆ ರಾಮನನ್ನು ಕರೆತರಲು ಲಕ್ಷ್ಮಣನನ್ನು ಕಳಿಹಿಸುವ ಪ್ರಶ್ನೆಯೇ ಇರಲಿಲ್ಲ.

ಇಬ್ಬರೇ ಆಶ್ರಮದಲ್ಲಿ ಇರುವ ಆ ಸನ್ನಿವೇಶವೇ ಅನುಕೂಲಗಳಿಗೆ ಯಾಗುತ್ತಿತ್ತು. ತನ್ನ ತಪ್ಪಿಗಾಗಿ ನೊಂದ ಸೀತೆ ಕೊನೆಗೆ ಅದಕ್ಕಾಗಿ ಮರುಗಿ

ಸ್ತ್ರೀ ಚಾಪಲಾತ್ ಏವಂ ಉದಾಹೃತಂ ಮಯಾ. ಸ್ತ್ರೀ ಬುದ್ಧಿಯು ಚಾಂಚಲ್ಯದಿಂದ ಲಕ್ಷ್ಮಣನ ಮೇಲೆ ಸಿಡಿದು ಅನರ್ಥಕ್ಕೆ ಗುರಿಯಾದೆ ಎನ್ನುತ್ತಾಳೆ. ಎಂಥ ವಿವೇಕಿಯೂ ದುಃಖದಲ್ಲಿ ದುಡುಕುವುದುಂಟು. ಸೀತೆಯ ಆ ದುಡುಕೇ ಕೆಡುಕಿಗೆ ಮೂಲವಾಯಿತು. ತಡೆಯಲಾರದ ಇಚ್ಛೆಯಿಂದ ಜಿಂಕೆ ಬೇಕೇಬೇಕು ಎಂದಾಗ ರಾಮನು

ಕಾಮವೃತ್ತಂ ಇದಂ ರೌದ್ರಂ ಸ್ತ್ರೀಣಾಂ ಅಸದೃಶಂ ಮತಂ

ಎಂದರೆ, ಮೋಹ ಲೋಭಗಳಿಂದ ಕೂಡಿದ ಈ ವರ್ತನೆ ಹೆಂಗಸರಿಗೆ ಯೋಗ್ಯವಾದುದಲ್ಲ ಎನ್ನುತ್ತಾನೆ. ಕಾಮ ಎಂದರೆ ಇಚ್ಛೆ ಎಂದು ಅರ್ಥವೇ ಹೊರತು ಎಲ್ಲಡೆಗೂ ಕೇವಲ ಕಾಮ ಎಂದಾಕ್ಷಣ ಮನ್ಮಥನನ್ನು ಕಾಣುವುದು. ಸರಿಯಲ್ಲ. ತನ್ನ ಒತ್ತಾಯದ ಪರಿಣಾಮ ನೋಡಿದ ಸೀತೆಯೇ ನಂತರ ಸ್ತ್ರೀ ಚಾಪಲಂ ಕ್ಷಂತುಮರ್ಹಸಿ ಎಂದು ಕ್ಷಮೆ ಬೇಡುತ್ತಾಳೆ. ಸೀತೆಯ ಮಾತಿನಲ್ಲಿ ಕಾಮವನ್ನು ಕಾಣುವುದು ಸ್ತ್ರೀ ಜಾತಿಗೆ ಅಪಮಾನ ಮಾಡಿದಂತೆ. ಜಗತ್ತಿನಲ್ಲಿ ಒಳ್ಳೆ ಜನ ಇದ್ದೇ ಇರುತ್ತಾರೆ. ಆದರ್ಶದಲ್ಲೂ ದೋಷ ಹುಡುಕುವ ಪ್ರವೃತ್ತಿ ಕೂಡದು. ರಾವಣನು ಸೀತೆಯಡೆ ಬಂದು ನಾನಾ ರೀತಿಯಲ್ಲಿ ಲೋಭವನ್ನು ತೋರಿಸುತ್ತ, ಎಲ್ಲಾ ಸ್ತ್ರೀಯರಿಗೆ ನಿನ್ನನ್ನು ಒಡತಿಯನ್ನಾಗಿ ಮಾಡುತ್ತೇನೆ ಜೀವನದಲ್ಲಿ ಯಾರ ಕಾಲನ್ನೂ ಹಿಡಿಯದ ನಾನು ನಿನ್ನ ಕಾಲಿಗೆ ಬೀಳುತ್ತೇನೆ.

ಪಶ್ಯೇ ದಾಸೋಹ ಮುಸ್ಮಿತೇ

ಈ ರಾಜ್ಯವನ್ನೆಲ್ಲಾ ನಿನ್ನ ತಂದೆ ಜನಕನಿಗೆ ಒಪ್ಪಿಸಿ ನಿನ್ನ ದಾಸನಾಗಿ ಬಾಳುತ್ತೇನೆ, ಋಷಿ ಪರಂಪರೆಯಿಂದ ಬಂದವ ಎಂದಾಗ ಸೀತೆ ನಿನ್ನನ್ನು ಎಡಗಾಲಿನಲ್ಲೂ ಮುಟ್ಟಲಾರೆ

ಚರಣೇನಾಪಿ ಸವ್ಯೇನ ಸ್ಪೃಶಾಮಿ ನನ್ನ ಗಂಡ ಸಿಂಹನಾದರೆ ನೀನೊಂದು ನೊಲ ಎನ್ನುತ್ತಾಳೆ.

ಆದ್ದರಿಂದಲೇ ಕಾಳಿದಾಸನು ಸಹಾ 14 ವರ್ಷ ಋಷಿ ಸದೃಶ್ಯ ಜೀವನ ನಡೆಸಿದ ಭರತನ ಜಡೆಯು ಸೀತೆಯ ಪಾದಸ್ಪರ್ಶದಿಂದ ಪವಿತ್ರವಾಯಿತು.

ಜನಕತನಯಾ ಸ್ನಾನಪುಣ್ಯೋದಕೇಷು.

ಅವಳು ಸ್ನಾನ ಮಾಡಿದ ನದಿ ತೀರ್ಥವಾಯಿತು. ಎಂದಿದ್ದಾನೆ. ಭಾಸನು ಜನಕನ ಬಾಯಿಂದ ನನ್ನ ಮಗಳನ್ನು ಶುದ್ಧಮಾಡಲು ಆ ಅಗ್ನಿಗೆ ಶಕ್ತಿ ಇದೆಯೆ? (ಕೋಯಂ ಅಗ್ನಿನಾಮ ?) ಎಂದಿದ್ದಾನೆ, ಭವಭೂತಿಯಂತೂ ಇನ್ನೂ ಮುಂದುವರಿದು ಭೂಮಿಯು ಗಂಗೆಯೂ ಸೀತೆಯಿಂದ ಪವಿತ್ರವಾದವು ಎಂದಿದ್ದಾನೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಸೀತೆ ಪರಿಶುದ್ಧೆ,

ಸೀತೆಯನ್ನು ಅರಣ್ಯಕ್ಕೆ ಬಿಟ್ಟು ಬರುವಾಗಲೂ ಲಕ್ಷ್ಮಣನ ಜೊತೆ ಸುಮಂತ್ರ ಸಾರಥಿಯಾಗಿದ್ದಾನೆ. ದುಃಖದಿಂದ ಲಕ್ಷ್ಮಣನು ಅಣ್ಣನ ಆಜ್ಞೆ ತಿಳಿಸಿದಾಗಲೂ ಸೀತೆಗೆ ರಾಮನ ಧರ್ಮಸಂಕಟ ಅರ್ಥವಾಗಿದೆ. ರಾಮನಿಗೆ ಬಂದ ಲೋಕಾಪವಾದವನ್ನು ನಾನು ದೂರ ಮಾಡಬೇಕು. ಪ್ರಾಣತೆತ್ತಾದರೂ ಪತಿಗೆ ಇಷ್ಟವಾದುದನ್ನು ಸತಿ ನೆರವೇರಿಸಬೇಕು.

ಪತಿರ್ಬಂಧು ಪತಿರ್ಗುರು ಪತಿರೇವ ನನಗೆ ಸರ್ವಸ್ವ, ಆದರೆ ಲಕ್ಷ್ಮಣ !

ನಿರೀಕ್ಷ್ಯ ಮಾದ್ಯಗಚ್ಛತ್ವಂ ಋತುಕಾಲಾತಿ ವರ್ತಿನೀಂ.

ನಾನು ಗರ್ಭಿಣಿಯಾಗಿದ್ದೇನೆ ನೋಡಿಕೊಂಡು ಹೋಗು, ಇನ್ನು ಏನೇನು ಅಪವಾದ ನಾನು ಜನರ ಬಾಯಿಂದ ಮುಂದೆ ಕೇಳಬೇಕಾಗುತ್ತದೆಯೋ ಅದಕ್ಕಾಗಿ ನೋಡಿಹೋಗು. ನಾನು ಆತ್ಮಹತ್ಯೆ ಮಾಡಿಕೊಂಡರೆ ಇಕ್ಷ್ವಾಕು ವಂಶವೇ ಅಳಿದುಹೋಗುತ್ತದೆ. ಈವರೆಗೆ ಭರತ,ಲಕ್ಷ್ಮಣ,ಶತ್ರುಘ್ನ ಯಾರಿಗೂ ಮಕ್ಕಳಿರಲಿಲ್ಲ, ಪುತ್ರಕಾಮೇಷ್ಟಿ ಯಾಗದಿಂದ ರಾಮಾದಿಗಳು ಹುಟ್ಟಿದವರು, ಆದ್ದರಿಂದ ಮುಂದೆ ತನಗೆ ಹುಟ್ಟುವ ಮಕ್ಕಳು ಈ ವಂಶದ ಕುಡಿಗಳು ಎಂಬುದು ಜಗತ್ತಿಗೆ ತಿಳಿದಿರಲಿ

ಅತ್ಯಂತ ಕರುಣಾಜನಕವಾದ ಕಣ್ಣೀರು ಮಿಡಿಯುವಂತ ಈ ದೃಶ್ಯವನ್ನು ನೋಡಿ ಅರ್ಥವಿಸಿಕೊಳ್ಳದವ, ಹೃದಯದಾರಿದ್ರ್ಯವುಳ್ಳವನೇ ಸರಿ. ಆ ಮಾತು ಕೇಳಿದ ಲಕ್ಷ್ಮಣ,

ಶಿರಸಾವಂದ್ಯ ಧರಣೀಂ ವ್ಯಾಹರ್ತುಂ ನ ಶಶಾಕಹ

ರಾಮನಿಲ್ಲದ ಈ ವೇಳೆಯಲ್ಲಿ ನಿನ್ನನ್ನು ನಾನು ಹೇಗೆ ನೋಡಲಿ? ಎಂದರೆ ಆತ ಸೀತೆಯ ಮುಖ ನೋಡೇ ಇಲ್ಲವೆಂದಲ್ಲ, ಗಮನವಿಟ್ಟು ನೋಡಿಲ್ಲ. ಎಂದರ್ಥ.

ನಾಹಂ ಜಾನಾಮಿ ನಿತ್ಯಂ ಕೇಯೂರೆ ನಾಹಂ ಜಾನಾಮಿ ಕುಂಡಲೇ ನೂಪುರೇತು ಅಭಿಜಾನಾಮಿ ನಿತ್ಯಂ ಪಾದಾಭಿವಂದಿತ್

ಎಂಬಲ್ಲಿಯೂ ಕಾಲುಗೆಜ್ಜೆಯನ್ನು ಹೊರತಾಗಿ ಉಳಿದ ಆಭರಣಗಳನ್ನು ಅಷ್ಟು ದೃಷ್ಟಿಯಿಟ್ಟು ನೋಡಿಲ್ಲವೆಂದರ್ಥವೇ ಹೊರತು, ನೋಡೇಯಿಲ್ಲವೆಂದಲ್ಲ. ಅನೇಕ ಬಾರಿ ನಮ್ಮ ಮನೆಯ ಸ್ತ್ರೀಯರ ಆಭರಣಗಳ ಪರಿಚಯವೂ ನಮಗಿರುವುದಿಲ್ಲ. ನಮ್ಮ ಮನೆಯಲ್ಲಿ ಹಿರಿಯರನ್ನು ಕೆಲವೊಮ್ಮೆ ಅವರಿಗೆ ಭಯವಾದಾಗ ಕೈಹಿಡಿದು ದಾಟಿಸುವಂತೆ, ಸೀತೆಯ ಕೈಹಿಡಿದು ದೋಣಿ ಹತ್ತಿಸು ಎಂದು ರಾಮ ಹೇಳಿದ್ದುಂಟು. ಇದಕ್ಕೆಲ್ಲಾ ಅಪಾರ್ಥ ಕಲ್ಪಿಸುವುದು ಕವಿವಾಣಿಗೆ ದ್ರೋಹ ಬಗೆದಂತೆ ಕತ್ತೆ ಸಾಕುವ ಅಗಸ ಸೀತೆಗೆ ಅಪವಾದ ನೀಡುವಂತೆ, ಕೆಲವರು ಅದಕ್ಕೂ ಮುಂದುವರಿದು ಲಕ್ಷ್ಮಣನಿಗೂ ಅಪವಾದ ತರುವುದು ಸೂಕ್ತವಲ್ಲ....

ಉಪಸಂಹಾರ ಎಂಬ ಕೊನೆಯ ಘಟ್ಟಕ್ಕೆ ಬರೋಣ. ವಾಲ್ಮೀಕಿಯ ಹಿಂದೆ ಸೀತೆ ಬರುವಾಗ ಬ್ರಹ್ಮನ ಹಿಂದೆ ಬರುವ ವೇದಮಾತೆ ಗಾಯತ್ರಿಯಂತೆ ಕಂಡಳು.

ದೃಷ್ಟ್ವಾ ಶೃತಿಮಿವ ಆಯಾಂತೀಂ

ಇಂತ ಸೀತೆಯ ಬಗ್ಗೆ ಎಂಥ ಕಲ್ಪನೆ? ಅವಳ ಮನದಲ್ಲಿ ಕ್ರಿಯೆಯಲ್ಲಿ ಮಾತಿನಲ್ಲಿ ಒಂದೇ ಒಂದು ತಪ್ಪಿಲ್ಲ. ಅಶೋಕವನದಲ್ಲಿ ಇರುವ ಸೀತೆಯನ್ನು 39 ಉಪಮಾನಗಳಲ್ಲಿ ವರ್ಣಿಸಿದ ಹನುಮಂತ ಇಂಥ ಪತಿವ್ರತೆಯನ್ನಗಲಿ ರಾಮನು ಜೀವಿಸಿದ್ದು ಆಶ್ಚರ್ಯವೇ ಸರಿ, ಎನ್ನುತ್ತಾನೆ. ಸ್ವತಃ ಪಾತ್ರಧಾರಿಯಾದ ವಾಲ್ಮೀಕಿಗಳು ಅವಳನ್ನು ಕರೆತಂದು ರಾಮನಿಗೆ ಒಪ್ಪಿಸುವಾಗ ಇವಳು ಅಶುಚಿಯಾಗಿದ್ದರೆ ನಾನು ಇಷ್ಟು ವರ್ಷ ಮಾಡಿದ ತಪಸ್ಸೆಲ್ಲಾ ವ್ಯರ್ಥವಾಗಲಿ ಎನ್ನುತ್ತಾರೆ. ಕಟ್ಟಕಡೆಗೆ ಇಕ್ಷ್ವಾಕು ವಂಶಕ್ಕೆ ಅವರ ಕುಡಿ ಒಪ್ಪಿಸಿ ತನ್ನ ನಿರ್ಯಾಣ ಬಯಸಿದ ಸೀತೆ

ಯಥಾಹಂ ರಾಘವಾದನ್ಯಂ ಮನಸಾಪಿ ನ ಚಿಂತಯೇ

ತ್ರಿಕರಣಪೂರ್ವಕವಾಗಿ ನಾನು ರಾಘವನನ್ನುಳಿದು ಇನ್ನೊಬ್ಬರನ್ನು ಮನಸ್ಸಿನಲ್ಲೂ ಕಲ್ಪಿಸದೇ ಪಾತಿವ್ರತ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ. ಭೂತಾಯಿಯು ನನ್ನೆಡೆ ಎಡೆಕೊಡಲಿ ಎಂದು ಪ್ರಾರ್ಥಿಸಿದಾಗ, ಭೂದೇವಿಯೇ ಎದ್ದು ಬಂದು ಸ್ವೀಕರಿಸಿ ಭೂಮಿಯಲ್ಲಿ ಇಳಿಯುವುದನ್ನು ಕಾಣಬಹುದು. ಹೀಗೆ ಸೀತೆಯು ನೀತಿ ರಾಮನ ಖ್ಯಾತಿ ಸೀತೆ ಭೂತಳವರಿಯೇ ಪರಿಶುದ್ಧೆ ಎಂಬುದು ರಾಮಾಯಣದುದ್ದಕ್ಕೂ ಸುಸ್ಪಷ್ಟ. (ಮುಗಿಯಿತು.)

---

ಸ್ಥಳೀಯ ವಿದ್ವದ್ಗೋಷ್ಠಿ ಇತ್ತೀಚೆಗೆ ಶಂಕರಮಠದಲ್ಲಿ ಏರ್ಪಡಿಸಿದ್ದ ವಾಲ್ಮೀಕಿ ರಾಮಾಯಣದಲ್ಲಿ ಸೀತೆ ಎಂಬ ಬಗ್ಗೆ ಬೆಂಗಳೂರಿನ ಪ್ರೊ|| ರಂಗನಾಥಶರ್ಮರು ಮಾಡಿದ ಉಪನ್ಯಾಸದ ಸಾರಾಂಶ.

---